# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ನಂ.03, ಅಟ್ಟೂರು, (ವಿಪತ್ತು ನಿರ್ವಹಣಾ ಕೋಶ) ವಾರ್ಡ್‌ಗೆ ಸಂಬಂಧಿಸಿದಂತೆ ದಿನಾಂಕ: 04-05-2020 ರಂದು ನಡೆದ ವಾರ್ಡ್ ಕಮಿಟಿ ವಿಪತ್ತು ನಿರ್ವಹಣಾ ಸಭೆಯ ಸಭಾ ನಡವಳಿಗಳು

1. ಅಧ್ಯಕ್ಷರು : ಶ್ರೀಮತಿ.ನೇತ್ರಾ ಪಲ್ಲವಿ.ಎಂ
(ಪಾಲಿಕೆ ಸದಸ್ಯರು ವಾರ್ಡ್: 03)

2. ಹಾಜರಿದ್ದ ಅಧಿಕಾರಿಗಳ ವಿವರ : ಮಾನ್ಯ ವಾರ್ಡ್ ಕಮಿಟಿಯ ಅಧ್ಯಕ್ಷರವರು, ಸಹಾಯಕ ಕಂದಾಯ ಅಧಿಕಾರಿ (ಯಲಹಂಕ ಉಪನಗರ), ವಿಪತ್ತು ನಿರ್ವಹಣೆ ಸಲಹೆಗಾರರಾದ ಶ್ರೀ.ರಘು ರವರು, ಸ್ಥಳೀಯ ಪೋಲೀಸ್ ಠಾಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು, ಬೆಂಗಳೂರು ಜಲ ಮಂಡಳಿ ಅಧಿಕಾರಿ, ವಾರ್ಡ್ ವ್ಯಾಪ್ತಿಯ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರು, ಹಿರಿಯ ಆರೋಗ್ಯ ಪರಿವೀಕ್ಷಕರು / ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.3 ರ ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು, ನಿವೃತ್ತ ಸರ್ಕಾರಿ ಅಧಿಕಾರಿಗಳು, ಸರ್ಕಾರೇತರ ಸಂಘ / ಸಂಸ್ಥೆಗಳ ಅಧ್ಯಕ್ಷರು / ಕಾರ್ಯದರ್ಶಿಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ಆರ್.ಡಬ್ಲ್ಯೂಎ) ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು ಹಾಜರಾಗಿರುತ್ತಾರೆ.

ಈ ದಿವಸ ಸೋಮವಾರ ಬೆಳಿಗ್ಗೆ 11:00 ಘಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.3 ರ ಸದಸ್ಯರ ಸಭಾ ಕೊಠಡಿಯಲ್ಲಿ ವಾರ್ಡ್ ಕಮಿಟಿ ವಿಪತ್ತು ನಿರ್ವಹಣಾ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ಪಾಲಿಕೆ ಸದಸ್ಯರು, ವಾರ್ಡ್ ನಂ.03, ಅಟ್ಟೂರು ರವರ ಅಧ್ಯಕ್ಷತೆಯಲ್ಲಿ ಹಾಗೂ ವಿಪತ್ತು ನಿರ್ವಹಣಾ ಸಲಹೆಗಾರರೊಂದಿಗೆ ವಿವಿಧ ಇಲಾಖೆಯ ಅಧಿಕಾರಿಗಳನ್ನು ಸಭೆಗೆ ಕರೆಯಲಾಗಿತ್ತು.

ವಾರ್ಡ್ ಕಮಿಟಿ ಕಾರ್ಯದರ್ಶಿಗಳಾದ ಸಹಾಯಕ ಕಂದಾಯ ಅಧಿಕಾರಿ (ಯಲಹಂಕ ಉಪನಗರ) ರವರು ವಾರ್ಡ್ ನಂ.03, ವಾರ್ಡ್ ಕಮಿಟಿ ಸದಸ್ಯರಿಗೆ ಹಾಗೂ ಹಾಜರಿದ್ದ ಅಧಿಕಾರಿ / ಸಿಬ್ಬಂದಿಗಳಿಗೆ ಸ್ವಾಗತ ಕೋರಿದ ನಂತರ ಸಭೆಯನ್ನು ಪ್ರಾರಂಭ ಮಾಡಲಾಯಿತು.

ವಿಪತ್ತು ನಿರ್ವಾಹಣಾ ಸಲಹೆಗಾರರಾದ ಶ್ರೀ.ರಘು ರವರು ಕೊವಿಡ್-19 ಗೆ ಸಂಬಂಧಿಸಿದಂತೆ, ಆರೋಗ್ಯ ವೈದ್ಯಾಧಿಕಾರಿಗಳನ್ನು ಕುರಿತು ಈ ಪ್ರದೇಶದಲ್ಲಿ ವಾಸವಾಗಿರುವ ಪ್ರತಿಯೊಬ್ಬರಿಗೂ ಜ್ವರ ಬಂದಿದೆಯೇ ಎಂಬುದರ ಬಗ್ಗೆ ಪರೀಕ್ಷೆ ಮಾಡಿ ಖಾತ್ರಿ ಪಡಿಸಿಕೊಳ್ಳಬೇಕೆಂದು ತಿಳಿಸುತ್ತಾ, ಎಲ್ಲಾ ಅಸೋಸಿಯೇಷನ್ ರವರು ಈ ಬಗ್ಗೆ ಜನಗಳಿಗೆ ಸ್ಪಷ್ಟ ಮಾಹಿತಿಯನ್ನು ನೀಡಿ ಜ್ವರ ಪರೀಕ್ಷೆ ಮಾಡಲು ಬರುವ ಆರೋಗ್ಯಾಧಿಕಾರಿಗಳಿಗೆ ಸಹಕರಿಸಲು ತಿಳಿಸುತ್ತಾ, ಪರೀಕ್ಷೆ ಮಾಡಲು ತೊಂದರೆ ಕೊಡುವಂತಹ ವ್ಯಕ್ತಿಗಳ ವಿರುದ್ಧ ಸರ್ಕಾರದ ಆದೇಶದಂತೆ ಪೋಲೀಸ್ ಠಾಣೆಗೆ ದೂರು ನೀಡಿ ಕೇಸ್ ದಾಖಲಿಸಿ ಎರಡು ವರ್ಷಗಳ ಕಾಲ ಜೈಲು ದಂಡನೆಯನ್ನು ವಿಧಿಸಲಾಗುವುದೆಂದು ಹಾಗೂ ಯಾರಾದರೂ ಮಾಸ್ಕ್ ಧರಿಸದೆ ಹೊರಗಡೆ ಬಂದ್ದಲ್ಲಿ ಇಂತಹ ವ್ಯಕ್ತಿಗಳಿಗೆ ರೂ.1000/- ಗಳ ದಂಡವನ್ನು ವಿಧಿಸಲಾಗುವುದೆಂದು ತಿಳಿಸಿದರು.

-ಮು.ತಿ.ನೋ.-

ಕೊವಿಡ್-19 ಕ್ಕೆ ಸಂಬಂಧಿಸಿದಂತೆ ಹಸಿರು ವಲಯಗಳೆಂದು ಗುರುತಿಸಿರುವ ವಲಯಗಳಲ್ಲಿ ಸ್ವಲ್ಪ ಮಟ್ಟಿಗೆ ಲಾಕ್‌ಡೌನ್ ಸಡಿಲಿಕೆ ಮಾಡಿರುವುದರಿಂದ ಎಲ್ಲಾ ಅಂಗಡಿಗಳನ್ನು ತೆರೆಯಲಾಗಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಓಡಾಡುವುದರಿಂದ ಆರೋಗ್ಯ ತಪಾಸಣೆಗೆ ಸಂಬಂಧಿಸಿದ ಎಲ್ಲಾ ಸಲಕರಣೆಗಳನ್ನು ಆರೋಗ್ಯಾಧಿಕಾರಿಗಳಿಂದ ಪಡೆದು ಪ್ರತಿಯೊಬ್ಬರನ್ನು ಸ್ಕ್ಯಾನಿಂಗ್ ಮಾಡಲು ಹಾಗೂ ಪ್ರಹರಿ / ಆಟೋಗಳ ಮೂಲಕ ಅಧಿಕ ಪ್ರಚಾರವನ್ನು ಮಾಡಿ ಸ್ಲಂಗಳನ್ನು ಗುರುತಿಸಿ ಇಂತಹ ಪ್ರದೇಶಗಳಲ್ಲಿಯೂ ಸಹ ಸ್ಕ್ಯಾನಿಂಗ್ ಮಾಡಲು ತಿಳಿಸಿದರು.

ವಲಸೆ ಕಾರ್ಮಿಕರು ವಾಸವಿರುವ ಸ್ಥಳಗಳಲ್ಲಿ ನೀರಿನ ತೊಂದರೆಯಿರುವುದರಿಂದ ಆಗಾಗ ಕೈ ತೊಳೆದು ಶುಚಿಯಾಗಿರಲು ಸಾಧ್ಯವಾಗುವುದಿಲ್ಲವಾದ್ದರಿಂದ ಇಂತಹ ಸ್ಥಳಗಳಲ್ಲಿ ಸ್ಯಾನಿಟೈಸರ್ ಹಾಗೂ ಮಾಸ್ಕ್‌ಗಳನ್ನು ವಿತರಿಸಲು ಕೋರುತ್ತಾ, ನೀರಿನ ಸೌಲಭ್ಯವನ್ನು ಕಲ್ಪಿಸಿಕೊಡಲು ವಾರ್ಡ್ ಕಮಿಟಿ ಸದಸ್ಯರಾದ ಶ್ರೀ.ಬಚ್ಚೇಗೌಡ ಮತ್ತು ಶ್ರೀ.ನಾಗಪ್ಪ ರವರುಗಳು ತಿಳಿಸಿದರು.

ವಿಪತ್ತು ನಿರ್ವಾಹಣಾ ಸಲಹೆಗಾರರಾದ ಶ್ರೀ.ರಘು ರವರು ಕೇಂದ್ರ ಸರ್ಕಾರದ ಆದೇಶದಂತೆ ಕೊವಿಡ್ ಸಡಿಲಿಕೆ ಹಿನ್ನೆಲೆಯಲ್ಲಿ ತಮ್ಮ ಊರುಗಳಿಗೆ ಹೋಗಲು ಇಚ್ಛಿಸಿರುವ ಕಟ್ಟಡ ಹಾಗೂ ಇನ್ನಿತರೆ ವಲಸೆ ಕಾರ್ಮಿಕರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ ತಮ್ಮ ತಮ್ಮ ಊರಿಗೆ ಕಳುಹಿಸಿಕೊಡುವ ಸಲುವಾಗಿ ಕಂದಾಯ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಸಹ ಪೋಲೀಸ್‌ರೊಂದಿಗೆ ಸಹಕರಿಸಿ ಕಾರ್ಯನಿರ್ವಹಿಸಲು ತಿಳಿಸಿದರು. ಈ ವೇಳೆ ಹಾಜರಿದ್ದ ಪೋಲೀಸ್ ಅಧಿಕಾರಿಗಳು ಬಹಳಷ್ಟು ಅಸಹಾಯಕ ಜನರು ಊಟಕ್ಕೆ ಬಹಳ ತೊಂದರೆಪಡುತ್ತಿದ್ದು, ಇಂತಹ ಜನರಿಗೆ ತಮ್ಮ ಕೈಲಾದಂತೆ ಹಣದ ಸಹಾಯವನ್ನು ಮಾಡಿ ಮಾಸ್ಕ್ / ಸ್ಯಾನೀಟರಿಗಳನ್ನು ನೀಡಲು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರ ಬಳಿ ಮಾತನಾಡಿ ಪೋಲೀಸ್ ಠಾಣೆಯಿಂದ ಮೆಜೆಸ್ಟಿಕ್ ಬಸ್‌ನಿಲ್ದಾಣಕ್ಕೆ ಜನರನ್ನು ಕಳುಹಿಸಿಕೊಡಲು ಅನುಕೂಲ ಮಾಡಿಕೊಡಲು ಕೋರಿದರು.

ಯಲಹಂಕ ವಲಯವು ಹಸಿರು ವಲಯಕ್ಕೆ ಒಳಗೊಂಡಿದ್ದು, ಇದೆ ಹಸಿರು ವಲಯವನ್ನು ಕಾಪಾಡುವ ಸಲುವಾಗಿ ಕೋವೀಡ್-19, ವಿಪತ್ತು ನಿರ್ವಹಣಾ ಕಾರ್ಯಕ್ಕೆ ಎಲ್ಲಾ ಕೇಂದ್ರ / ಸರ್ಕಾರಿ / ಅರೆಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳನ್ನೊಳಗೊಂಡಂತೆ ಒಂದು ವಾಟ್ಸ್‌ಆಪ್ ಗ್ರೂಪ್ ಅನ್ನು ಮಾಡಲು ಹಾಗೂ ಈ ಗ್ರೂಪ್‌ನಲ್ಲಿ ಜನಪರವಾಗಿ ಕಾರ್ಯನಿರ್ವಹಿಸಲು ಇಚ್ಛಿಸುವ ಯಾವುದೇ ಒಳ್ಳೆಯ ವ್ಯಕ್ತಿಗಳನ್ನು ಸಹ ಈ ಗ್ರೂಪ್‌ಗೆ ಸೇರಿಸಿಕೊಂಡು ಕೊರೋನಾ ಮುಕ್ತ ವಲಯವಾಗಿಡಲು ಎಲ್ಲರೂ ಕೈಜೋಡಿಸಿ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ವಾರ್ಡ್ ಕಮಿಟಿ ಅಧ್ಯಕ್ಷರು, ದೇಶದ್ಯಾಂತ ಕೊರೋನಾ ಹರಡುತ್ತಿದ್ದು, ಇಂತಹ ಸಮಯದಲ್ಲಿ ರಾಜ್ಯದ ಸ್ವಚ್ಛತೆಯನ್ನು ಕಾಪಾಡುತ್ತಿರುವ ಪೌರಕಾರ್ಮಿಕರಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ 3 ತಿಂಗಳಿಂದ ವೇತನವನ್ನು ಪಾವತಿ ಮಾಡಿರುವುದಿಲ್ಲವಾದ್ದರಿಂದ ಈ ಬಗ್ಗೆ ಪರಿಶೀಲಿಸಿ, ಇವರಿಗೆ ವೇತನವನ್ನು ಬಿಡುಗಡೆ ಮಾಡಲು ತಿಳಿಸಿದರು ಹಾಗೂ ಎಲ್ಲಾ ಪೌರಕಾರ್ಮಿಕರು ಕಡ್ಡಾಯವಾಗಿ ಮಾಸ್ಕ್, ಕೈಗಳಿಗೆ ಗ್ಲೌಸ್ ಧರಿಸಿ ಕಾರ್ಯನಿರ್ವಹಿಸಲು ತಿಳಿಸಿದರು.

ವಾರ್ಡ್ ಕಮಿಟಿ ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದಿಸಿದ ತರುವಾಯ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

M. Nethrapallavi M.Sc.,
Corporator B.B.M.P.
Ward-3 Attur

ಅಧ್ಯಕ್ಷರು
ವಾರ್ಡ್ ಸಮಿತಿ ಮತ್ತು ಪಾಲಿಕೆ ಸದಸ್ಯರು
ವಾರ್ಡ್ ನಂ.3

ಪ್ರತಿಯನ್ನು:-

1. ಮಾನ್ಯ ಅಧ್ಯಕ್ಷರು, ವಾರ್ಡ್ ಕಮಿಟಿ, ವಾರ್ಡ್ ನಂ.03, ಅಟ್ಟೂರು ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಉಪ ಆಯುಕ್ತರು ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿ, ಯಲಹಂಕ ವಿಭಾಗ, ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಸದಸ್ಯರು, ವಾರ್ಡ್ ಕಮಿಟಿ, ವಾರ್ಡ್ ನಂ.03, ಅಟ್ಟೂರು ರವರುಗಳ ಮಾಹಿತಿಗಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಲಹಂಕ ಉಪನಗರ) ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಆರೋಗ್ಯ ವೈದ್ಯಾಧಿಕಾರಿಗಳು ಬ್ಯಾಟರಾಯನಪುರ ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.3 ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ಬ್ಯಾಟರಾಯನಪುರ ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ (ಯಲಹಂಕ ಉಪನಗರ) ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ (ಯಲಹಂಕ ಉಪನಗರ) ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ (ಯಲಹಂಕ) ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಯಲಹಂಕ ಪೋಲೀಸ್ ಠಾಣೆ (ಯಲಹಂಕ ಉಪನಗರ) ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಸಂಚಾರಿ ಪೋಲೀಸ್ ಠಾಣೆ (ಯಲಹಂಕ ಉಪನಗರ) ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ಕಛೇರಿ ಕಡತಕ್ಕೆ.